# ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ

## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಕೆ.ಪಿ. ಬಸವರಾಜ | **ಪಿಡಬ್ಲ್ಯೂ.16** |
| **ತಂದೆಯ ಹೆಸರು** | : | ಕೆ. ಪರಮೇಶ್ವರಪ್ಪ | **ಸಿಡಬ್ಲ್ಯೂ.38** |
| **ವಯಸ್ಸು** | : | **50 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)ಎಲ್.ಟಿ. ರೇಟಿಂಗ್ ಉಪ ವಿಭಾಗ, ಬೆ.ವಿ.ಕಂ. ಚಿತ್ರದುರ್ಗ | **ದಿನಾಂಕ: 31.12.2018** |
| **ವಾಸಸ್ಥಳ** | : | ಚಿತ್ರದುರ್ಗ. | |

## ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

2012 ರಿಂದ 2014 ರ ವರೆಗೆ ನಾನು ಚಿತ್ರದುರ್ಗದ ಬೆಸ್ಕಾಂ ಇಲಾಖೆಯ ನಗರ ಉಪವಿಭಾಗದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಚಿತ್ರದುರ್ಗ ಲೋಕಾಯುಕ್ತ ಪೊಲಿಸರು ನಮ್ಮ ಕಚೇರಿಗೆ ದಿ: 07.06.2014 ರಂದು ಪತ್ರ ಬರೆದು, ಆರೋಪಿ –2 ಶ್ರೀಮತಿ ರಾಜೇಶ್ವರಿ ಇವಳ ಹೆಸರಿನಲ್ಲಿರುವ ಮನೆಗೆ, ಕಟ್ಟುವ ಕಾಲಕ್ಕೆ ತಾತ್ಕಾಲಿಕವಾಗಿ ವಿದ್ಯುತ್ ಚ್ಛಕ್ತಿ ಸರಬರಾಜು ಪಡೆದ ಬಗ್ಗೆ,ನಂತರ ಬಿಲ್ ಕಟ್ಟಿದ ಬಗ್ಗೆ ಕೇಳಿದ್ದರು. ಆ ಪ್ರಕಾರ ನಮ್ಮ ಕಚೇರಿಯ ದಾಖಲೆ ಪರಿಶೀಲಿಸಲಾಗಿ ಖಾತಾ ನಂ. 10888, ಅಸೆಸ್ ಮೆಂಟ್ ನಂ. 18673/1 ಇದು ಆರೋಪಿ 2 ರಾಜೇಶ್ವರಿ ಹೆಸರಿನಲ್ಲಿರುತ್ತದೆ. ಸದರಿ ಜಾಗದಲ್ಲಿ ಮನೆ ಕಟ್ಟಲು ಆರೋಪಿ 2 ರಾಜೇಶ್ವರಿ ಇವರು ದಿ: 13.02.2012 ರಂದು ತಾತ್ಕಾಲಿಕ ವಿದ್ಯುತ್ ಚ್ಛಕ್ತಿ ಸರಬರಾಜು ಪಡೆದಿರುತ್ತಾರೆ. ಆ ವೇಳೆಯಲ್ಲಿ ಆರೋಪಿ 2 ನಮ್ಮ ಇಲಾಖೆಗೆ ರೂ.5800/– ಠೇವಣಿ ಅಂತ ಕೊಟ್ಟಿರುತ್ತಾರೆ.

2. ತದ ನಂತರ ಆರೋಪಿ –2 ರಾಜೇಶ್ವರಿ ಇವರು ಸದರಿ ಆಸ್ತಿಯಲ್ಲಿ ಕಟ್ಟಿರುವ ಮನೆಗೆ ವಿದ್ಯುತ್ ಚ್ಚಕ್ತಿ ಸರಬರಾಜನ್ನು ತಾತ್ಕಾಲಿಕ ವಾಗಿ ಪಡೆದು ಆ ವೇಳೆಯಲ್ಲಿ ರೂ.30,808/– ಪಾವತಿ ಮಾಡಿರುತ್ತಾರೆ. ನಂತರ ಖಾಯಂ ಆಗಿ ಎ.ಇ.ಹೆಚ್. ನಂ.9042 ನೇದ್ದರ ಮುಖಾಂತರ ಪ್ರತೀ ತಿಂಗಳು 27.11.2013 ರ ನಂತರ ವಿದ್ಯುತ್ ಚ್ಚಕ್ತಿ ಬಿಲ್ ಕಟ್ಟುತ್ತಾ ಬಂದಿರುತ್ತಾರೆ . ಅದಕ್ಕೆ ರೂ.2,160/– ಠೇವಣಿ ಇಟ್ಟಿರುತ್ತಾರೆ . ಆ ಎ.ಇ.ಹೆಚ್. ನಂಬರ್ ಮುಖಾಂತಾರ ದಿಃ 04.06.2014 ವರೆಗೆ ರೂ.3,570/– ಪಾವತಿ ಮಾಡಿರುತ್ತಾರೆ . ಸಿ ಡಬ್ಲ್ಯೂ–72 ಸತ್ಯನಾರಾಯಣ, ಪಿ.ಐ. ಇವರು ಕೊಟ್ಟಂತಹ ಪತ್ರ ಗುರುತಿಸುತ್ತೇನೆ . ಅದನ್ನು ನಿಪಿಃ 29 ಅಂತ ಗುರುತಿಸಲಾಯಿತು . ನಾನು ಕೊಟ್ಟ ವರದಿ ರೂಪದ ಪತ್ರವನ್ನು ಗುರುತಿಸುತ್ತೇನೆ. ಅದನ್ನು ನಿಪಿಃ 30 ಅಂತ ಗುರುತಿಸಲಾಯಿತು .

ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್. ವಕೀಲರಿಂದಃ ಪಾಟೀ ಸವಾಲುಃ

3. ಆರೋಪಿ –2 ರಾಜೇಶ್ವರಿ ಇವರು ಸರಬರಾಜು ಪಡೆಯುವ ಕಾಲಕ್ಕೆ ನಮ್ಮ ಕಚೇರಿಯಲ್ಲಿ ಕೊಟ್ಟಂತಹ ಖಾತಾ ನಕಲು ನೋಡಿ, ನಾನು ಅವರ ಹೆಸರಿನಲ್ಲಿ ಆಸ್ತಿ ಇದೆ ಅಂತ ಹೇಳಿದ್ದೇನೆ . ಆ ಪ್ರಕಾರ ನಾನು ವರದಿ ಕೊಟ್ಟಿದ್ದೇನೆ . ನಮ್ಮ ಕಚೇರಿಯಲ್ಲಿರುವ ಗಣಕ ಯಂತ್ರ (ಕಂಪ್ಯೂಟರ್ )ನಲ್ಲಿರುವ ಮಾಹಿತಿಯನ್ನು ನೋಡಿ ನಾನು ನಿಪಿಃ 30 ವರದಿ ಕೊಟ್ಟಿದ್ದೇನೆ . ನಮ್ಮ ಕಚೇರಿಯಲ್ಲಿರುವ ಕಂಪ್ಯೂಟರ್ , ಖಾತಾ ನಕಲು ನೋಡಿದರೆ ನಿಪಿಃ 30 ವರದಿಯಲ್ಲಿರುವ ವಿಷಯ ಸರಿ ಇದೆಯೋ ಅಥವಾ ತಪ್ಪು ಇದೆಯೋ ಅಂತ ಕಂಡು ಕೊಳ್ಳಬಹುದು . ಕಂಪ್ಯೂಟರ್ ನಲ್ಲಿರುವ ಆರೋಪಿ 2 ಕೊಟ್ಟಂತಹ ಠೇವಣಿ ಬಗ್ಗೆ , ಬಿಲ್ ಪಾವತಿ ಮಾಡಿದ ವಿವರವನ್ನು ನಾನು ಪ್ರತ್ಯೇಕವಾಗಿ ತನಿಖಾಧಿಕಾರಿಗೆ ಕೊಟ್ಟಿಲ್ಲ .

4. ನಿಪಿಃ 30 ವರದಿಯನ್ನು ನಮ್ಮ ಕಚೇರಿಯ ರೆವಿನ್ಯೂ ಶಾಖೆಯವರು ಮಾಡಿರುತ್ತಾರೆ . ಅವರು ತಯಾರು ಮಾಡಿದ ಮೇಲೆ ನಾನು ಅದಕ್ಕೆ ಸಹಿ ಮಾಡಿದ್ದೇನೆ . ಕಂಪ್ಯೂಟರ್ ನಲ್ಲಿರುವ ಮಾಹಿತಿಯನ್ನು ನಾನು ಸ್ವತಃ ಡೌನ್ ಲೋಡ್ ಮಾಡಿ

ನೋಡಿರುವುದಿಲ್ಲ . ಆದರೆ ನಾನೇ ಸ್ವತಃ ಕಂಪ್ಯೂಟರ್ ನಲ್ಲಿರುವ ಮಾಹಿತಿ ನೋಡಿ ನಿಪಿಃ 30 ವರದಿಗೆ ಸಹಿ ಮಾಡಿದ್ದೇನೆ . ಸಾಮಾನ್ಯವಾಗಿ ಡಿಮ್ಯಾಂಡ್ ಬಿಲ್ಲನ್ನು ಬೇರೆ ಯಾರಾದರೂ ವ್ಯಕ್ತಿ ತಂದು ಹಣ ಪಾವತಿ ಮಾಡಿದಾಗ ಅಂತಹ ಹಣವನ್ನು ನಾವು ಸಂಬಂಧಪಟ್ಟ ಆರ್.ಆರ್. ಗೆ ಜಮಾ ಮಾಡಿಕೊಳ್ಳುತ್ತೇವೆ . ನಾನು ಹೇಳಿದ ನಿಪಿಃ 30 ರಲ್ಲಿರುವ ಹಣವನ್ನು ಆರೋಪಿ 2 ರಾಜೇಶ್ವರಿ ಕಟ್ಟಿದ್ದಾರೋ ಅಥವಾ ಬೇರೆ ಯಾರು ಕಟ್ಟಿದ್ದಾರೋ ನನಗೆ ಗೊತ್ತಿಲ್ಲ. ಅದೇ ರೀತಿ ಮನೆ ಖಾತಾ ನಂ. 10888, ಅಸೆಸ್ ಮೆಂಟ್ ನಂ. 18673/1 ಇದನ್ನು ಯಾರಿಗಾದರೂ ಬಾಡಿಗೆ ಕೊಟ್ಟಿದ್ದಾರೋ ಹೇಗೊ ನನಗೆ ಗೊತ್ತಿಲ್ಲ .

5. ನಾನು ಹೇಳುವ ಹಾಗೆ ಆರೋಪಿ –2 ರಾಜೇಶ್ವರಿ ಡಿಪಾಸಿಟ್ ಹಣ ಕಟ್ಟಿಲ್ಲ, ಬಿಲ್ ಹಣ ಕಟ್ಟಿಲ್ಲ ಅಂತ ಕೇಳಿದ ಪ್ರಶ್ನೆಗೆ ಸಾಕ್ಷಿ ಹೇಳುತ್ತಾರೆ ಆ ಹಣವನ್ನು ನಮ್ಮ ಇಲಾಖೆಗೆ ನೇರವಾಗಿ ಯಾರು ಕಟ್ಟಿದ್ದಾರೆ ಅಂತ ಹೇಳಲು ಬರುವುದಿಲ್ಲ . ಏಕೆಂದರೆ ಬೇರೆಯವರು ಕೂಡ ಆರೋಪಿ –2 ರಾಜೇಶ್ವರಿ ರವರ ಹೆಸನರಿಲ್ಲಿ ಹಣ ಕಟ್ಟುವ ಸಾಧ್ಯತೆ ಇದೆ . ನಾನು ಹೇಳುವ ಹಾಗೆ ಆರೋಪಿ –2 ರಾಜೇಶ್ವರಿ ಯಾವುದೇ ಹಣ ಕಟ್ಟಿಲ್ಲ ಎನ್ನುವುದು ಸುಳ್ಳು . ಹೀಗಾಗಿ ಕಂಪ್ಯೂಟರ್ ನಲ್ಲಿ ಎಂಟ್ರಿ ಇಲ್ಲ ಎನ್ನುವುದು ಸುಳ್ಳು . ಆ ಕಾರಣಕ್ಕಾಗಿ ಕಂಪ್ಯೂಟರ್ ನಲ್ಲಿರುವಂತಹ ಹಾರ್ಡ್ ಕಾಪಿಯನ್ನು ನಾನು ಕೋರ್ಟಿಗೆ ಕೊಟಿಲ್ಲ ಎನ್ನುವುದು ಸುಳ್ಳು .

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.